# 370ನೇ ವಿಧಿ ಮತ್ತು 35ಎ ವಿಧಿಗಳ ಸಾಧಕ ಮತ್ತು ಬಾಧಕಗಳು



"ಒಂದು ರಾಷ್ಟ್ರದಲ್ಲಿ ಎರಡು ಕಾನೂನು
ಇಬ್ಬರು ಮುಖ್ಯಸ್ಥರು ಹಾಗೂ ಎರಡು
ಧ್ವಜಗಳು ನಡೆಯುವುದಿಲ್ಲ"
- ದೀನದಯಾಳ್ ಉಪಾಧ್ಯಾಯ

ದೇಶದ ಆಡಳಿತ ವ್ಯವಸ್ಥೆಯಲ್ಲಿ ವಿಶೇಷ ಸ್ಥಾನಮಾನದೊಂದಿಗೆ ಪ್ರತ್ಯೇಕವಾಗಿದ್ದ ಜಮ್ಮು & ಕಾಶ್ಮೀರವನ್ನು ಎರಡಾಗಿ ವಿಭಜಿಸಿ ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸುವುದರೊಂದಿಗೆ ಜಮ್ಮು & ಕಾಶ್ಮೀರದ 370ನೇ ವಿಧಿ ಮತ್ತು 35ಎ ವಿಧಿಗಳನ್ನು ರದ್ದು ಮಾಡಲಾಗಿದೆ. ಈ ರದ್ದತಿಯಿಂದ ಇನ್ನು ಮುಂದೆ ಜಮ್ಮು & ಕಾಶ್ಮೀರ ರಾಜ್ಯವನ್ನು ಜಮ್ಮು & ಕಾಶ್ಮೀರ ಡಿವಿಷನ್ ಮತ್ತು ಲಡಾಖ್ ಡಿವಿಷನ್ ಎಂದು ವಿಭಜಿಸಿ ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಪರಿವರ್ತಿಸಲಾಗುತ್ತಿದೆ.

**370ನೇ ವಿಧಿಯ ಹಿನ್ನೆಲೆ :**

ಭಾರತದ ಸ್ವತಂತ್ರ್ಯದ ನಂತರ 549 ಸಂಸ್ಥಾನಗಳು ಭಾರತದೊಂದಿಗೆ ವಿಲೀನವಾದವು. ಆದರೆ ಜಮ್ಮು & ಕಾಶ್ಮೀರವನ್ನು ಆಳುತ್ತಿದ್ದ ರಾಜಾ ಹರಿಸಿಂಗ್ ಸ್ವತಂತ್ರವಾಗಿ ಇರಲು ಬಯಸಿದ್ದ. ಆದರೆ ಪಾಕಿಸ್ತಾನದ ಗೆರಿಲ್ಲಾಗಳು ಕಾಶ್ಮೀರವನ್ನು ಒತ್ತುವರಿ ಮಾಡಿಕೊಂಡರು. ಅವರಿಂದ ತನ್ನ ಸಾಮ್ರಾಜ್ಯ ರಕ್ಷಿಸಿಕೊಳ್ಳಲು ರಾಜಾ ಹರಿಸಿಂಗ್ ಭಾರತದೊಂದಿಗೆ ವಿಲೀನವಾಗಲು ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂರವರ ನಡುವೆ 1947 ಅಕ್ಟೋಬರ್ 26 ರಂದು ಒಪ್ಪಂದವಾಗಿತ್ತು. ಇದನ್ನು "ವಿಲೀನ ಒಪ್ಪಂದ" ಎನ್ನುವರು. ಜಮ್ಮು & ಕಾಶ್ಮೀರಕ್ಕೆ ವಿಶೇಷಾಧಿಕಾರ ಮತ್ತು ವಿಶೇಷ ಸ್ಥಾನಮಾನ ನೀಡುವ ಷರತ್ತು ಈ ವಿಲೀನ ಒಪ್ಪಂದದಲ್ಲೇ ಇತ್ತು.

370ನೇ ವಿಧಿಯನ್ನು 1949 ರಲ್ಲಿ ರೂಪಿಸಿ 'ತಾತ್ಕಾಲಿಕ ಕರಾರು' ಎಂದೇ ಉಲ್ಲೇಖಿಸಲ್ಪಟ್ಟಿದ್ದು, ಸಂವಿಧಾನದ 21ನೇ ಭಾಗದಲ್ಲಿ ಈ ವಿಧಿಯ ಉಲ್ಲೇಖವಿದೆ.

**ಈ ವಿಧಿಯ ಅಂಶಗಳು :**

1. ಜಮ್ಮು & ಕಾಶ್ಮೀರಕ್ಕೆ ತನ್ನದೇ ಆದ ಪ್ರತ್ಯೇಕ ಸಂವಿಧಾನವನ್ನು ಹೊಂದಲು ಈ ವಿಧಿಯು ಅವಕಾಶ ನೀಡುತ್ತದೆ. ಭಾರತ ಸಂವಿಧಾನದಿಂದ ಜಮ್ಮು & ಕಾಶ್ಮೀರಕ್ಕೆ ವಿನಾಯಿತಿ ನೀಡುತ್ತದೆ.
2. ಜಮ್ಮು & ಕಾಶ್ಮೀರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ/ಸಂಸತ್ತಿನ ಅಧಿಕಾರವನ್ನು ಈ ವಿಧಿಯು ಸೀಮಿತಗೊಳಿಸುತ್ತದೆ. ಭದ್ರತೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕಕ್ಕೆ ಸಂಬಂಧಿಸಿದಂತೆ ಮಾತ್ರ ಭಾರತದ ಸಂಸತ್ತು ಜಮ್ಮು & ಕಾಶ್ಮೀರದ ಮೇಲೆ ಕಾನೂನು ರೂಪಿಸಬಹುದು.
3. ಕೇಂದ್ರ ಸರ್ಕಾರದ ಇತರ ಯಾವುದೇ ಸಂವಿಧಾನಿಕ ಅಧಿಕಾರವನ್ನು ಜಮ್ಮು & ಕಾಶ್ಮೀರದ ಮೇಲೆ ಅನ್ವಯಿಸುವ ಮುನ್ನ, ಜಮ್ಮು & ಕಾಶ್ಮೀರದ ಒಪ್ಪಿಗೆ ಪಡೆಯಬೇಕು. ಇದಕ್ಕೆ ಜಮ್ಮು & ಕಾಶ್ಮೀರದ ಸಂವಿಧಾನ ರಚನಾ ಸಭೆಯ ಸಮ್ಮತಿ ಅಗತ್ಯ.



Scanned by CamScanner

4. ಜಮ್ಮು & ಕಾಶ್ಮೀರದ ಸಂವಿಧಾನ ರಚನಾ ಸಭೆಯು, ಸಭೆ ಸೇರುವವರಿಗೆ ಮಾತ್ರ ರಾಜ್ಯ ಸರ್ಕಾರಕ್ಕೆ ಸಮ್ಮತಿ ಸೂಚಿಸುವ ಅಧಿಕಾರವಿರುತ್ತದೆ. ಅಧಿಕಾರ ಹಂಚಿಕೆಯನ್ನು ಜಮ್ಮು & ಕಾಶ್ಮೀರದ ಸಂವಿಧಾನ ರಚನಾ ಸಭೆಯು ಅಂತಿಮಗೊಳಿಸಿದ ನಂತರ ಅದರಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶವಿಲ್ಲ.
5. ಜಮ್ಮು & ಕಾಶ್ಮೀರದ ಸಂವಿಧಾನ ರಚನಾ ಸಭೆಯ ಶಿಫಾರಸ್ಸಿನ ಆಧಾರದ ಮೇಲೆ ಭಾರತ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಬಹುದು ಎಂದು 370 ವಿಧಿಯ 3ನೇ ಅವಧಿಯನ್ನು ರದ್ದುಗೊಳಿಸಬಹುದು ಎಂದು 370 ವಿಧಿಯ 3ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಈ ವಿಧಿಯು ಸಿಂದುತ್ವ ಕಳೆದುಕೊಳ್ಳುತ್ತದೆ ಎಂದು ಘೋಷಿಸುವ ಅಧಿಕಾರವನ್ನು ರಾಷ್ಟ್ರಪತಿ ಅವರಿಗೆ 3ನೇ ಸೆಕ್ಷನ್ ನೀಡುತ್ತದೆ.
6. ಭಾರತ ಸ್ವಾತಂತ್ರ್ಯದ ನಂತರ 1965 ರವರೆಗೆ ಜಮ್ಮು & ಕಾಶ್ಮೀರದ ಮುಖ್ಯಮಂತ್ರಿಯವರನ್ನು 'ಪ್ರಧಾನಿ' ಎಂದು ರಾಜ್ಯಪಾಲರನ್ನು 'ಸಾದರೆ-ಇ-ರಿಯಾಸತ್' ಎನ್ನುತ್ತಿದ್ದರು.

**35ಎ ವಿಧಿಯ ಬಗ್ಗೆ :**

1954 ರ ಮೇ 14 ರಂದು ರಾಷ್ಟ್ರಪತಿಯವರ ಆದೇಶದ ಮೂಲಕ 370ನೇ ವಿಧಿಗೆ ಪೂರಕವಾಗಿ '35ಎ' ವಿಧಿಯನ್ನು ಸೇರಿಸಲಾಯಿತು. ಇದನ್ನು ಮೂಲ ಸಂವಿಧಾನದಲ್ಲಿ ಸೇರಿಸಿಲ್ಲ. ಬದಲಿಗೆ ಸಂವಿಧಾನದ ಅನುಬಂಧದಲ್ಲಿ '35ಎ' ವಿಧಿಯನ್ನು ಪಟ್ಟಿ ಮಾಡಲಾಗಿದೆ.

**ಅಂಶಗಳು :**

1. ಜಮ್ಮು & ಕಾಶ್ಮೀರದ ಶಾಶ್ವತ ನಿವಾಸಿಗಳು ಯಾರು ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ಇದು ನೀಡುತ್ತದೆ.
2. ಶಾಶ್ವತ ನಿವಾಸಿಗಳ ಹಕ್ಕುಗಳನ್ನು ಇದು ನಿರ್ಧರಿಸುತ್ತದೆ. ಈ ಪ್ರಕಾರ ಶಾಶ್ವತ ನಿವಾಸಿಗಳು ಮಾತ್ರ ರಾಜ್ಯದಲ್ಲಿ ಸ್ಥಿರಾಸ್ತಿಯನ್ನು ಖರೀದಿಸಬಹುದು. ಸರ್ಕಾರಿ ನೌಕರಿ ಪಡೆಯಬಹುದು ಮತ್ತು ವ್ಯವಹಾರಗಳನ್ನು ನಡೆಸಬಹುದು.
3. ವಿದ್ಯಾರ್ಥಿ ವೇತನ ಸೇರಿದಂತೆ ಸರ್ಕಾರದ ಯಾವುದೇ ನೆರವನ್ನು ರಾಜ್ಯದ ಶಾಶ್ವತ ನಿವಾಸಿಗಳಿಗೆ ಮಾತ್ರ ಇದು ಸೀಮಿತಗೊಳಿಸುತ್ತದೆ.

**370ನೇ ವಿಧಿ ಮತ್ತು 35ಎ ವಿಧಿಗಳನ್ನು ರದ್ದು ಮಾಡಲು ಕಾರಣಗಳು :**

* 370ನೇ ವಿಧಿಯ ಕಾರಣದಿಂದಾಗಿ 1989 ರಿಂದ 2018 ರ ನಡುವೆ ರಾಜ್ಯದಲ್ಲಿ 41,849 ಮಂದಿಯ ಹತ್ಯೆಯಾಗಿದೆ.
* ಜಮ್ಮು & ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ನೆಲೆಯಾಗಲು 370ನೇ ವಿಧಿಯೇ ದೊಡ್ಡ ತೊಡಕಾಗಿತ್ತು.
* ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡಲು ಮತ್ತು ಬಡತನ ಮಡುಗಟ್ಟಲು ಇದು ಕಾರಣವಾಗಿತ್ತು.
* ಇದು ಮಹಿಳೆಯರು, ದಲಿತರು ಮತ್ತು ಆದಿವಾಸಿಗಳಿಗೆ ಮಾರಕವಾಗಿತ್ತು.
* ಇದು ಭಯೋತ್ಪಾದನೆಯ ಮೂಲವಾಗಿತ್ತು. ಕಾಶ್ಮೀರ ಕಣಿವೆಯನ್ನು ಭಯೋತ್ಪಾದನೆಯಿಂದ ಮುಕ್ತಗೊಳಿಸುವ ಉದ್ದೇಶದಿಂದ 370ನೇ ವಿಧಿಯನ್ನು ರದ್ದುಗೊಳಿಸಲಾಯಿತು.
* ಸಂವಿಧಾನದ 370ನೇ ವಿಧಿ ಜಾರಿಯಾಲ್ಲಿದ್ದ ಕಾರಣ ಜಮ್ಮು & ಲಡಾಖ್ ಭಾಗದ ಜನರಿಗೆ ಬಹಳಷ್ಟು ಸಮಸ್ಯೆ ಉಂಟಾಗಿದ್ದು ಕಾಶ್ಮೀರದ ಜನರು ಈ ವಿಧಿಯ ಎಲ್ಲ ಸೌಲಭ್ಯಗಳನ್ನು ಅನುಭವಿಸುತ್ತಿದ್ದರು.* ವಿಶೇಷವಾಗಿ ಹೊರ ರಾಜ್ಯದವರನ್ನು ವಿವಾಹವಾದ ಮಹಿಳೆಯರಿಗೆ ಪಾಲಕರ ಆಸ್ತಿಯಲ್ಲಿ ಪಾಲು ಸಿಗುತ್ತಿರಲಿಲ್ಲ.



Scanned by CamScanner

* ಕಾಶ್ಮೀರದ ಜನರಿಗೆ ಅಪ್ಯಾಯಮಾನವಾಗಿರುವ ವಿಶೇಷ ಸವಲತ್ತುಗಳು ಜಮ್ಮು & ಲಡಾಖ್ ಭಾಗದ ಜನರಿಗೆ ಕಂಟಕವಾಗಿ ಪರಿಣಮಿಸಿತ್ತು.
* ಇಂಡಿಯನ್ ಪೀನಲ್ ಕೋಡ್ ಬದಲಿಗೆ ರಣವೀರ್ ಪೀನಲ್ ಕೋಡ್ ಜಾರಿಯಲ್ಲಿತ್ತು.
* ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಆಗಿಲ್ಲ. - ಸಂಪೂರ್ಣವಾಗಿ ದೇಶದಲ್ಲಿ 2002 ರಲ್ಲಿ ಲೋಕಸಭೆ ಮತದಾರ ಕ್ಷೇತ್ರಗಳ ಮರುವಿಂಗಡಣೆ ಆಗಿದ್ದರೂ ಜಮ್ಮು & ಕಾಶ್ಮೀರದಲ್ಲಿ ಆಗಿರಲಿಲ್ಲ.
* ರಾಜ್ಯದಲ್ಲಿ ಇತರೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಇಲ್ಲ. ಪರಿಶಿಷ್ಟ ಪಂಗಡದವರಿಗೂ 1991 ರ ವರೆಗೂ ಮೀಸಲಾತಿ ಇರಲಿಲ್ಲ. ಈಗ ಅವರಿಗೆ ಉದ್ಯೋಗ ಶಿಕ್ಷಣದಲ್ಲಿ ಮೀಸಲಾತಿ ನೀಡಲಾಗಿದ್ದರೂ ರಾಜಕೀಯ ಮೀಸಲಾತಿ ಇಲ್ಲ.
* ಭಾರತದ ಇನ್ನಿತರೆ ರಾಜ್ಯಗಳಲ್ಲಿ ವಿಧಾನ ಸಭೆಗಳ ಕಾಲಾವಧಿ 5 ವರ್ಷಗಳಾಗಿದ್ದರೂ, ಜಮ್ಮು & ಕಾಶ್ಮೀರದ ವಿಧಾನ ಸಭೆ ಅವಧಿ 6 ವರ್ಷಗಳಾಗಿತ್ತು.
* ಆರ್.ಟಿ.ಐ ಅನ್ವಯವಾಗುತ್ತಿರಲಿಲ್ಲ.
* ಜನಪ್ರತಿನಿಧಿಗಳು ಜಮ್ಮು & ಕಾಶ್ಮೀರದ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸುತ್ತಿದ್ದರೆ ಹೊರತು ಭಾರತ ಸಂವಿಧಾನದ ಹೆಸರಿನಲ್ಲಿ ಅಲ್ಲ.
* ಜಮ್ಮು & ಕಾಶ್ಮೀರರ ಪ್ರತ್ಯೇಕ ಸಂವಿಧಾನ ಮತ್ತು ಪ್ರತ್ಯೇಕ ಧ್ವಜ ಸಂಹಿತೆ ಅಸ್ತಿತ್ವದಲ್ಲಿತ್ತು.
* ಕಾಶ್ಮೀರಿಗಳು ಬಡವರಾಗಿ ಉಳಿದಿದ್ದಾರೆ. ಕಾಶ್ಮೀರದ ಜಮೀನಿಗೆ ಈಗ ಬೇಡಿಕೆಯೂ ಇಲ್ಲ, ಬೆಲೆಯೂ ಇಲ್ಲ, ಜಮೀನಿನ ಮಾಲಿಕತ್ವ ಸಮಸ್ಯೆ ಇರುವುದರಿಂದ ಯಾರೂ ಇಲ್ಲಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗುತ್ತಿಲ್ಲ.

**ಈ ರದ್ದತಿಯಿಂದ ಆಗುವ ಅನಾನುಕೂಲಗಳು :**

* 370ನೇ ವಿಧಿ ಅಸಿಂಧುಗೊಳಿಸುವ ಮೂಲಕ ಭಾರತದ ಇತರ ಭಾಗಗಳ ಜೊತೆ ಜಮ್ಮು & ಕಾಶ್ಮೀರಕ್ಕೆ ಇದ್ದ ಸಂವಿಧಾನಿಕ ಹಾಗೂ ಐತಿಹಾಸಿಕ ಸಂಪರ್ಕ ಕೊನೆಗೊಂಡು, 1940 ರ ದಶಕದಲ್ಲಿದ್ದ ಪ್ರಕ್ಷುಬ್ಧತೆ ಮತ್ತೆ ಬರಬಹುದು.
* ಪಾಕಿಸ್ತಾನ ಜಾಗತಿಕ ಮಟ್ಟದಲ್ಲಿ ಭಾರತದೊಂದಿಗೆ ಯುದ್ಧ ಮಾಡುವ ಸಾಧ್ಯತೆ.
* 370ನೇ ವಿಧಿ ಮತ್ತು 35ಎ ವಿಧಿಗಳ ರದ್ದತಿಯಿಂದ ಇಡೀ ರಾಜ್ಯದ ಜನಸಂಖ್ಯೆ ಮತ್ತು ಜನಾಂಗೀಯ ಸ್ವರೂಪವೇ ಏರುಪೇರಾಗಬಹುದು.
* ಜಮ್ಮು & ಕಾಶ್ಮೀರವನ್ನು ಭಾರತದೊಂದಿಗೆ ವಿಲೀನ ಮಾಡುವ ವೇಳೆ 'ರಾಜಾ ಹರಿಸಿಂಗ' ಅವರೊಂದಿಗೆ ಮಾಡಿಕೊಂಡ ಷರತ್ತಿನ ಉಲ್ಲಂಘನೆಯಾಗುತ್ತದೆ.(ಕಾರಣ ಷರತ್ತು ಹೀಗಿತ್ತು - "ವಿಲೀನ ಪತ್ರದಲ್ಲಿನ ನನ್ನ ಷರತ್ತುಗಳನ್ನು ಯಾವುದೇ ತಿದ್ದುಪಡಿಕಾಯ್ದೆ ಅಥವಾ 1947 ರ ಭಾರತದ ಸ್ವಾತಂತ್ರ್ಯ ಕಾಯ್ದೆಯ ಮೂಲಕ ಬದಲಿಸುವಂತಿಲ್ಲ. ನಾನು ಒಪ್ಪಿಗೆ ಸೂಚಿಸಿರುವ ಪೂರಕ ಒಪ್ಪಂದದ ಮೂಲಕವಷ್ಟೇ ಅಂತಹ ಬದಲಾವಣೆಗಳನ್ನು ಮಾಡಬೇಕು")

**ಸುಪ್ರೀಂಕೋರ್ಟ್‌ನ ಆದೇಶ :**

ಭಾರತದ ಸ್ಟೇಟ್ ಬ್ಯಾಂಕ್ ಮತ್ತು ಸಂತೋಷ್ ಗುಪ್ತ ನಡುವಿನ ವ್ಯಾಜ್ಯದಲ್ಲಿ ಸುಪ್ರೀಂಕೋರ್ಟ್ ಈ ಕೆಳಕಂಡಂತೆ ಆದೇಶಿಸಿದೆ.

ಸಂವಿಧಾನದ 370ನೇ ವಿಧಿಯನ್ನು ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಭೆಯ ಒಪ್ಪಿಗೆ ಮೂಲಕವಷ್ಟೇ ರದ್ದುಪಡಿಸಬಹುದು ಎಂದು ಸಂವಿಧಾನದ 370(3)ನೇ ವಿಧಿಯು ಹೇಳುತ್ತದೆ. ರಾಜ್ಯದ ಸಂವಿಧಾನ ಸಭೆಯು ರದ್ದಾಗಿರುವ ಕಾರಣ 370ನೇ ವಿಧಿಯು ನೀಡುವ ವಿಶೇಷ ಅಧಿಕಾರವು ಶಾಶ್ವತವಾಗಿ ಮಾರ್ಪಟ್ಟಿದೆ.



Scanned by CamScanner

**370ನೇ ವಿಧಿ ಮತ್ತು 35ಎ ವಿಧಿಯ ರದ್ದತಿಯ ಪರಿಣಾಮಗಳು :**

1. ಕಾಶ್ಮೀರಿಗಳಿಗೆ ಇನ್ನು ದ್ವಿಪೌರತ್ವವಿಲ್ಲ.
2. ಅಲ್ಪಸಂಖ್ಯಾತರಿಗೆ ಶೇ.16 ಮೀಸಲಾತಿ.
3. ಸಂವಿಧಾನದ 360ನೇ ವಿಧಿ ಕಾಶ್ಮೀರಕ್ಕೆ ಅನ್ವಯ.
4. ವಿಧಾನಸಭೆ ಅವಧಿ 6 ವರ್ಷದಿಂದ 5 ವರ್ಷಕ್ಕೆ ಇಳಿಕೆ ಆಗಲಿದೆ.
5. ಮಹಿಳೆಯರ ನೇಮಕಕ್ಕೆ ಅವಕಾಶ : ಹೊಸ ನಿಯಮದ ಪ್ರಕಾರ ಲೆಫ್ಟಿನೆಂಟ್ ಗವರ್ನರ್ ಅವರಿಗೆ ಮಹಿಳಾ ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಎಂದು ಕಂಡು ಬಂದರೆ ಇಬ್ಬರು ಮಹಿಳಾ ಪ್ರತಿನಿಧಿಗಳನ್ನು ನಾಮನಿರ್ದೇಶನದ ಮೂಲಕ ಆಯ್ಕೆ ಮಾಡಬಹುದು.
6. ಬೇರೆ ರಾಜ್ಯಗಳಂತೆ ಇಲ್ಲಿನ ಪಂಚಾಯತಿಗಳಿಗೂ ಅದೇ ಮಾದರಿ ಹಕ್ಕುಗಳಿರಲಿವೆ.
7. ಮಕ್ಕಳಿಗೆ ಶಿಕ್ಷಣದ ಹಕ್ಕು ಕಾನೂನಿನ ಅನುಕೂಲ ಸಿಗಲಿದೆ.
8. ಕಾಶ್ಮೀರಿ ಪಂಡಿತರ ವಾಪಸಾತಿಗೆ ಅನುಕೂಲ : 1990 ರ ದಶಕದಲ್ಲಿ ಕಾಶ್ಮೀರ ಕಣಿವೆಯನ್ನು ತೊರೆದಿದ್ದ ಕಾಶ್ಮೀರಿ ಪಂಡಿತರು ಮರಳಿ ಬರಲು ಸಹಕಾರಿಯಾಗಿದೆ. 1990 ರಲ್ಲಿ ಕಣಿವೆಯಿಂದ 7.5 ಲಕ್ಷ ಮಂದಿ ಒತ್ತಾಯ ಪೂರ್ವಕವಾಗಿ ಕಾಶ್ಮೀರಿ ಪಂಡಿತರವನ್ನು ಗಡಿಪಾರು ಮಾಡಲಾಗಿತ್ತು.
9. ಪ್ರತ್ಯೇಕ ಸಂವಿಧಾನ ಮತ್ತು ಪ್ರತ್ಯೇಕ ಧ್ವಜವಿಲ್ಲ.
10. ಕಾನೂನು ಸುವ್ಯವಸ್ಥೆ ಕೇಂದ್ರದ ಕೈಯಲ್ಲಿ ನೂತನವಾಗಿ ರಚಿತವಾದ ಈ ಕೇಂದ್ರಾಡಳಿತ ಪ್ರದೇಶದಲ್ಲಿ ಎಲ್ಲ ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಮೇಲೆ ಕೇಂದ್ರ ಸರ್ಕಾರ ಇನ್ನು ಮುಂದೆ ಸಂಪೂರ್ಣ ಅಧಿಕಾರ ಹೊಂದಿರಲಿದೆ.
11. ಜಮ್ಮು & ಕಾಶ್ಮೀರದಲ್ಲಿ ಇನ್ನು ಮುಂದೆ ರಾಜ್ಯಪಾಲರ ಸ್ಥಾನವನ್ನು ರಾಷ್ಟ್ರಪತಿಗಳ ಆಡಳಿತಾತ್ಮಕ ಪ್ರತಿನಿಧಿಯಾಗಿರುವ ಲೆಫ್ಟಿನೆಂಟ್ ಗವರ್ನರ್ ಅವರು ತುಂಬಲಿದ್ದಾರೆ.
12. ಪ್ರಸ್ತುತ ಇರುವ ಜಮ್ಮು ಹೈಕೋರ್ಟ್‌ನ ವ್ಯಾಪ್ತಿಗೆ ಲಡಾಖ್ ಕೇಂದ್ರ ಪ್ರದೇಶವು ಸೇರಿದ್ದು, ಎರಡಕ್ಕೂ ಒಂದೇ ಹೈಕೋರ್ಟ್ ಇರಲಿದೆ.
13. ಜಮ್ಮು & ಕಾಶ್ಮೀರ ಕೇಂದ್ರಾಡಳಿತ ಪ್ರದೇಶ ಹಾಗು ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿ ಯಾವುದೇ ಸ್ವರೂಪದ ಉದ್ದಿಮೆ ಅಥವಾ ವ್ಯವಹಾರವನ್ನು ಇನ್ನು ಮುಂದೆ ನಡೆಸಬಹುದು.
14. ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಮತ್ತು ವ್ಯವಹಾರಿಕ ಸಂಸ್ಥೆಗಳು ಇಲ್ಲಿ ಸ್ಥಾಪನೆಯಾಗಲಿವೆ.
15. ಪ್ರವಾಸೋಧ್ಯಮವು ತ್ವರಿತವಾಗಿ ಬೆಳೆಯಲಿದೆ.

370ನೇ ವಿಧಿ ಹಾಗೂ 35ಎ ವಿಧಿಯ ರದ್ಧತಿಯ ಪರಿಣಾಮಗಳನ್ನು ಆಲಿಸಿದಾಗ ಈ ಉದ್ದೇಶಕ್ಕಾಗಿ ಹೋರಾಟ ಮಾಡಿ ಹುತಾತ್ಮರಾದ "ಶ್ಯಾಮ ಪ್ರಸಾದ್ ಮುಖರ್ಜಿ" ಅವರ ಆತ್ಮಕ್ಕೆ ಶಾಂತಿ ಸಿಕ್ಕಿದೆ ಎಂದು ಹೇಳಬಹುದು.

* ಜಮ್ಮು & ಕಾಶ್ಮೀರ ಮತ್ತು ಲಡಾಖ್‌ಗೆ ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನ ಜಮ್ಮು & ಕಾಶ್ಮೀರ ಶಾಸನ ಸಭೆ ಹೊಂದಿರಲಿದ್ದು, ಇದು ದೆಹಲಿ ಮತ್ತು ಪಾಂಡಿಚೇರಿ ಸ್ಥಾನಮಾನ ಪಡೆಯಲಿದೆ. ಈ ಮೂಲಕ ಪ್ರಸ್ತುತವಾಗಿ ವಿಸ್ತೀರ್ಣದಲ್ಲಿ ಅತಿ ದೊಡ್ಡ ಕೇಂದ್ರಾಡಳಿತ ಪ್ರದೇಶವಾಗಿದೆ.
* ಲಡಾಖ್‌ನಲ್ಲಿ ಯಾವುದೇ ವಿಧಾನ ಸಭೆ ಇರುವುದಿಲ್ಲ ಲೆಫ್ಟಿನಂಟ್ ಗವರ್ನರ್ ಇರುತ್ತಾರೆ.

ಒಟ್ಟಾರೆಯಾಗಿ 370ನೇ ವಿಧಿ ಮೂಲತಃ ಕಾಶ್ಮೀರದ ಸ್ವಾಯತ್ತೆತೆಗೆ ಸಂಬಂಧಿಸಿದ ವಿಚಾರ. ಅಲ್ಲಿನ ಜನರ ಬದುಕಿಗೆ ಹತ್ತಿರವಾದ ಪ್ರಶ್ನೆಯೂ ಹೌದು. ವಿಧಿ 35ಎ ಶಾಶ್ವತ ನಿವಾಸಿಗಳ ಹಕ್ಕುಗಳನ್ನು ನಿರ್ಧರಿಸುತ್ತಿತ್ತು, ಅದನ್ನು ಪ್ರಜಾತಾಂತ್ರಿಕ ಚೌಕಟ್ಟಿನಲ್ಲೇ ನಿರ್ಧರಿಸಬೇಕಿತ್ತು ಎಂಬುದು ಒಂದು ಕಡೆಯಾದರೆ ಈ ರದ್ದತಿಯಿಂದ ಕಾಶ್ಮೀರ ಹಾಗೂ ಲಡಾಖ್ ಪ್ರದೇಶಗಳಿಗೆ ಇಂದು ಸ್ವಂತಂತ್ರ ಸಿಕ್ಕಂತಾಗಿದೆ. ಜಮ್ಮು & ಕಾಶ್ಮೀರ ಪ್ರದೇಶದ ಅಭಿವೃದ್ಧಿಯ ಕನಸು ನನಸಾಗಲಿದೆ ಹಾಗೂ ದೇಶ ಒಂದೇ ಎಂಬ ಭಾವನೆ ಉಂಟು ಮಾಡುವ ಈ ತೀರ್ಮಾನ ಒಳ್ಳೆಯ ನಡೆಯಾಗಿದ್ದು, ಭಾರತೀಯರ ಪಾಲಿಗೆ 2019 ಆಗಸ್ಟ್ 5 ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನವಾಗಿದೆ.



Scanned by CamScanner